DITTO WS

Reg. No. : ....................................

Name : ..........................................

**SY-516**

**SECOND YEAR HIGHER SECONDARY EXAMINATION, MARCH 2023**

Part – III

**KANNADA**

Maximum : 80 Scores

Time : **2½** Hours

Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. 'ಕನ್ನಡದ ಆದಿ ಕವಿ' ಎಂಬ ಬಿರುದಿಗೆ ಪಾತ್ರನಾದವನು ?

   (ಹರಿಹರ, ಪಂಪ, ರತ್ನಾಕರವರ್ಣಿ, ಲಕ್ಷ್ಮೀಶ)

2. 'ಮೋಡ ಒಡೀದೇ ಮಳೆ ಹೆಂಗ ಬಂದಾವು ?' – ಎಂದು ಹೇಳಿದವರು ಯಾರು ?

   (ಭರತ, ಕೈಕೇಯಿ, ದಶರಥ, ಮಂಥರಾ)

3. 'ಇಳೆಯಾಂಡ ಗುಡಿಮಾರ' ಈ ಪಾಠಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ?

   (ಷಟ್ಪದಿ, ಕೀರ್ತನೆ, ರಗಳೆ, ಚಂಪೂ)

4. 'ಹರಳುಗಟ್ಟಿದ ಬಗೆ' ಪಾಠಭಾಗವನ್ನು ಅನುಪಮಾ ನಿರಂಜನರ ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?



P.T.O.

DITTO WS

**(5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.) (4 × 1 = 4)**

5. ಹೇಮ – ಈ ಪದದ ಅರ್ಥವನ್ನು ಬರೆಯಿರಿ.

6. ಆಕಾಶ – ಈ ಪದದ ತದ್ಭವ ರೂಪವನ್ನು ಬರೆಯಿರಿ.

7. ಹೋಗು – ಈ ಪದದ ಎರಡು ನಿಷೇದಾರ್ಥ ರೂಪವನ್ನು ಹೆಸರಿಸಿರಿ.

8. ಧರೆ – ಇದರ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

9. ಗಂಧೋದಕ – ಈ ಪದವನ್ನು ವಿಂಗಡಿಸಿ ಬರೆಯಿರಿ.

10. ಕೆಳಗೆ ಕೊಟ್ಟಿರುವ ವಾಕ್ಯದಲ್ಲಿ ತದ್ಧಿತ ಪ್ರತ್ಯಯವಿರುವ ಪದವನ್ನು ಗುರುತಿಸಿರಿ.

    ತೆನ್ನಾಲಿ ರಾಮಕೃಷ್ಣನು ಅದ್ಭುತ ಮಾತುಗಾರನೂ ಚತುರನೂ ಆಗಿದ್ದನು.

**(11 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.) (5 × 2 = 10)**

11. ಕೆಳಗೆ ಕೊಟ್ಟಿರುವ ಜೀವನಚರಿತ್ರೆಯ ಭಾಗವನ್ನು ಆತ್ಮಕಥೆಯ ರೂಪಕ್ಕೆ ಪರಿವರ್ತಿಸಿರಿ.

    ಅನುಪಮಾ ನಿರಂಜನರ ಬರವಣಿಗೆ 1975 ರ ಹೊತ್ತಿಗೆ ಹೊಸ ತಿರುವನ್ನು ಪಡೆಯಿತು. ಅವರು ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಲು ಶುರು ಮಾಡಿದರು. ಸ್ವಂತ ಪರಿಶ್ರಮದಿಂದಲೇ ಸಾಧಿಸಬೇಕು ಎಂದುಕೊಂಡರು.

12. ‘ಪಾಡಿ’ ಯಿಂದ ಕೊನೆಗೊಳ್ಳುವ ಯಾವುದಾದರೂ ನಾಲ್ಕು ಸ್ಥಳನಾಮಗಳನ್ನು ಬರೆಯಿರಿ.

13. ಲೇಖನಚಿಹ್ನೆ ಬಳಸಿಕೊಂಡು ಬರೆಯಿರಿ.

    ಅಬ್ಬಾ ಆ ದೃಶ್ಯವನ್ನು ಕಂಡಾಗ ನನಗೆ ಮೈ ರೋಮಾಂಚನಗೊಂಡಿತ್ತು ಎಂದನು ರಮೇಶ

14. ಗ್ರಾಮ್ಯ ಭಾಷೆಯಲ್ಲಿರುವ ವಾಕ್ಯವನ್ನು ಶಿಷ್ಟಭಾಷೆಗೆ ಪರಿವರ್ತಿಸಿ ಬರೆಯಿರಿ.

    ಭಾಳ ಚಾಲೂಕ ಕಣ್ರಿ, ಇವ್ರು ಅಕ್ಷರಮಾಲೀನೇ ಉಲ್ಟಾಪಲ್ಟಾ ಮಾಡಿಬಿಟ್ಟಾರು.

15. ಪಂಚದ್ರಾವಿಡ ಭಾಷೆಗಳನ್ನು ಹೆಸರಿಸಿರಿ.

16. ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ಬರೆಯಿರಿ.

ಬಾಳೆತೋಟಕ್ಕೆ ದಾಳಿಯಿಟ್ಟ ಆನೆಗಳ ಹಿಂಡು ಬಾಳೆಗಳನ್ನೆಲ್ಲಾ ಉರುಳಿಸಿ ಚೆಲ್ಲಾಪಿಲ್ಲಿ ಮಾಡಿದವು.

17. ಕೆಳಗಿನ ವಾಕ್ಯವನ್ನು ಸರಳವಾಕ್ಯಗಳಾಗಿ ವಿಭಜಿಸಿ ಬರೆಯಿರಿ.

ತುಳುವರ ಗರಡಿವಿದ್ಯೆ ತುಂಬಾ ವಿಶಿಷ್ಟವಾದುದಲ್ಲದೆ ಅದರಲ್ಲಿ ಸುಮಾರು ಹದಿನೆಂಟು ವಿಧದ ಅಭ್ಯಾಸಗಳಿವೆ.

**(18 ರಿಂದ 22 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.)** **($4 \times 4 = 16$)**

18. ಕೆಳಗೆ ಕೊಟ್ಟಿರುವ ಪದ್ಯಭಾಗದ ಆಶಯ ಬರೆಯಿರಿ.

ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು
ನಿನ್ನ ಗೆಲ್ದೆನಗೊಂದು ಜಸವೆ
ಪನ್ನಗನರಸುರಲೋಕದುತ್ತಮರು ಛಿ
ಯೆನ್ನರೆ ಯೋಚಿಸಿನೋಡು

19. ಮಾತೃಭಾಷೆಯ ಮಹತ್ವದ ಕುರಿತು ಟಿಪ್ಪಣಿ ಬರೆಯಿರಿ.

20. 'ಮಂಥರಾ' ನಾಟಕದಲ್ಲಿ ಬಂದಿರುವ ಮಂಥರೆಯ ಮಾತನ್ನು ಕೆಳಗೆ ನೀಡಲಾಗಿದೆ. ಅದರ ಸ್ವಾರಸ್ಯವನ್ನು ಬರೆಯಿರಿ.

ಕುರ್ಚಿಗೆ ಕಾಲು ನಾಕು ಇರತಾವು
ಆದ್ರ ಪೀಠ ಒಂದೇ ಇರ್ತಾವ
ಒಂದು ಪೀಠದ ಮ್ಯಾಲೆ ಒಬ್ಬ ಮಾತ್ರ ಕೂಡಲಿಕ್ಕೆ ತಕ್ಕ

21. ನೀವು ಕೈಗೊಂಡ ಯಾವುದಾದರೂ ಪ್ರವಾಸದ ಅನುಭವಗಳನ್ನು ವಿವರಿಸಿಕೊಂಡು ನಿಮ್ಮ ಸ್ನೇಹಿತರಿಗೆ ಪತ್ರವೊಂದನ್ನು ಬರೆಯಿರಿ.

22. 'ನೀನೆನ್ನಂತರಂಗದೊಳ್ ಗುಪ್ತಳಾಗು' – ಈ ಮಾತನ್ನು ಯಾರು ಯಾರಿಗೆ ಹೇಳಿದರು ? ಸಂದರ್ಭವನ್ನು ತಿಳಿಸಿರಿ.

**(23 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(5 × 6 = 30)**

23. ಇಳೆಯಾಂಡ ಗುಡಿಮಾರನ ಭಕ್ತಿಯನ್ನು ಶಿವನು ಪರೀಕ್ಷಿಸಿದ ಬಗೆ ಯಾವುದು ? ನಿಮ್ಮ ಮಾತುಗಳಲ್ಲಿ ಬರೆಯಿರಿ.

24. ಅಗ್ರಪೂಜೆಗೆ ಶ್ರೀಕೃಷ್ಣನು ಅರ್ಹನೆಂದು ಭೀಷ್ಮರು ನುಡಿದಾಗ ಅದನ್ನು ವಿರೋಧಿಸಿ ಶಿಶುಪಾಲನು ಆಡಿದ ಮಾತುಗಳಾವುವು ? ವಿವರಿಸಿರಿ.

25. ಕನ್ನಡ ಭಾಷಾ ಪ್ರಭೇಧಗಳ ಕುರಿತು ಪರಿಚಯಾತ್ಮಕ ಟಿಪ್ಪಣಿ ಬರೆಯಿರಿ.

26. 'ಇಡ್ಲಿ' ಎಂಬ ಪದದ ಹುಟ್ಟು ವಿಕಾಸದ ಕುರಿತು ಲೇಖಕರು ಹೇಳಿರುವ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

27. ದುಷ್ಟಬುದ್ಧಿಯು ಚಂದ್ರಹಾಸನ ಕೈಯಲ್ಲಿ ಕೊಟ್ಟು ಕಳುಹಿಸಿದ ಪತ್ರದಲ್ಲಿ ಏನೆಂದು ಬರೆಯಲಾಗಿತ್ತು ? ಅದರಲ್ಲಿ ವಿಷಯೆ ಮಾಡಿದ ಮಾರ್ಪಾಟುಗಳೇನು ? ವಿವರಿಸಿರಿ.

28. ಕನ್ನಡದಲ್ಲಿ ನಾಟಕ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಿರಿ.

**(29 ರಿಂದ 31 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(2 × 8 = 16)**

29. ಶ್ರೀಮತಿಯನ್ನು ವರಿಸಲು ಬಂದ ನಾರದ ಮತ್ತು ಪರ್ವತರು ಶ್ರೀಹರಿಯಿಂದ ವಂಚನೆಗೊಳಗಾದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

30. 'ಧರೆಮೆಚ್ಚದಣ್ಣ ಸೋದರರ ಕಾಳಗಕೆ' ಕಾವ್ಯಭಾಗದಲ್ಲಿ ಮೂಡಿಬಂದ ಭರತನ ಪಾತ್ರಚಿತ್ರಣ ಮಾಡಿರಿ.

31. ಯುವರಾಜ ಪಟ್ಟವನ್ನು ಭರತನಿಗೆ ಒಪ್ಪಿಸುವಂತೆ ಮಂಥರೆ ಹೂಡಿದ ಉಪಾಯವೇನು ? ಅದರ ಪರಿಣಾಮಗಳೇನು ? ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ ಬರೆಯಿರಿ.

---